### ಶಿಕ್ಷಣ ಕ್ಷೇತ್ರದಲ್ಲಿನ ಅನನ್ಯ ಸಾಧನೆಗೆ ಸಂದ ಗೌರವ | ವಿಶ್ವಮಾನವ ಪರಿಕಲ್ಪನೆ ಬಿತ್ತಲು ನೀನಾಸಂ ಸತೀಶ್ ಸಲಹೆ

# ವಿಕ-ಬಿಎಂ ಎಜುಕೇಶನ್ ಎಕ್ಸಲೆನ್ಸ್ ಪ್ರಶಸ್ತಿ ಪ್ರದಾನ

■ **ವಿಕ ಸುದ್ದಿಲೋಕ** ಬೆಂಗಳೂರು

ಶಿಕ್ಷಣ ಕ್ಷೇತ್ರದಲ್ಲಿ ಅನನ್ಯ ಸಾಧನೆ ಮಾಡಿದ ರಾಜ್ಯದ 29 ಸಾಧಕರಿಗೆ ವಿಜಯ ಕರ್ನಾಟಕದ 'ಎಜುಕೇಶನ್ ಎಕ್ಸಲೆನ್ಸ್-2023' ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ನಟ ನೀನಾಸಂ ಸತೀಶ್, ''ಶಿಕ್ಷಣ ಸಂಸ್ಥೆಗಳಲ್ಲಿ ಮಕ್ಕಳ ಬದುಕು ಬದಲಿಸುವ ದೊಡ್ಡ ಶಕ್ತಿ ಅಡಗಿದೆ. ಆ ಶಕ್ತಿಯನ್ನು ಸರಿ ದಾರಿಯಲ್ಲಿ ಧಾರೆ ಎರೆದರೆ, ಮಕ್ಕಳ ಭವಿಷ್ಯ ಉಜ್ವಲವಾಗುತ್ತದೆ. ಆದ್ದರಿಂದ ಶಿಕ್ಷಕರು, ಶಿಕ್ಷಣ ಸಂಸ್ಥೆಗಳು ಮಕ್ಕಳಿಗೆ ಪಠ್ಯದ ಜತೆಗೆ ಮಾನವೀಯ ಮೌಲ್ಯಗಳನ್ನು ಒಳಗೊಂಡ ನೈತಿಕ ಶಿಕ್ಷಣ ನೀಡಬೇಕು,'' ಎಂದು ಸಲಹೆ ನೀಡಿದರು.

THE TIMES GROUP
VK ವಿಜಯ ಕರ್ನಾಟಕ VIJAY KARNATAKA
BangaloreMirror
VK & BM EDUCATION EXCELLENCE AWARDS-2023

''ಇಂದಿನ ಶಿಕ್ಷಣ ವ್ಯವಸ್ಥೆಯು ವಿದ್ಯಾರ್ಥಿಗಳನ್ನು ಅಂಕ ಗಳಿಕೆಗೆ ಸೀಮಿತಗೊಳಿಸಿದೆ. ಶಿಕ್ಷಕರು, ಪಾಲಕರು ಕೂಡ ಅಂಕ ಗಳಿಕೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಾರೆ. ಇದರಿಂದ ಮಕ್ಕಳ ಮೇಲೆ ಒತ್ತಡ ಹೆಚ್ಚಾಗುತ್ತಿದ್ದು, ಮಕ್ಕಳ ಆಲೋಚನಾ ಶಕ್ತಿಯನ್ನೇ ಕುಗ್ಗಿಸಿದೆ,'' ಎಂದು ಬೇಸರ ವ್ಯಕ್ತಪಡಿಸಿದರು.

''ಮಕ್ಕಳನ್ನು ದೇವರ ಸಮಾನ ಎಂದು ಕರೆಯಲಾಗುತ್ತದೆ. ಅಷ್ಟೊಂದು ಮುಗ್ಧವಾಗಿ ಹುಟ್ಟಿದ ಮಕ್ಕಳು ಬೆಳೆದಂತೆಲ್ಲ ಭ್ರಷ್ಟ, ಕಳ್ಳತನ, ಭಯೋತ್ಪಾದನಾ ಕೃತ್ಯಗಳಲ್ಲಿ ತೊಡಗಿಸಿಕೊಂಡು ದೇಶವನ್ನೇ ಹಾಳು ಮಾಡುವ ಮಟ್ಟಿಗೆ ಬೆಳೆಯುತ್ತಾರೆ ಎಂದಾದರೆ, ನಾವು ಯಾವ ರೀತಿಯ ಶಿಕ್ಷಣ ಕೊಡುತ್ತಿದ್ದೇವೆ ಎಂಬ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ಮನೆಯೇ ಮೊದಲ ಪಾಠ ಶಾಲೆ. ಆದ್ದರಿಂದ ಪಾಲಕರು, ಶಿಕ್ಷಕರು ಮಕ್ಕಳಲ್ಲಿ ಚಿಕ್ಕಂದಿನಿಂದಲೇ ಮಾನವೀಯ ಮೌಲ್ಯಗಳನ್ನು ಬೆಳೆಸಬೇಕು,'' ಎಂದು ಸಲಹೆ ನೀಡಿದರು.

## ವಿಶ್ವಮಾನವ ಪರಿಕಲ್ಪನೆ

''ಸಮಾಜದಲ್ಲಿ ಜಾತಿ-ಧರ್ಮಗಳಿಂದ ಗುರುತಿಸುವ ಕೆಲಸವಾಗುತ್ತಿದೆ. ಇದು ಮಕ್ಕಳ ಭವಿಷ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಇದರಿಂದ ಮಕ್ಕಳು ತಪ್ಪು ದಾರಿಗೆ ಹೋಗುತ್ತಿದ್ದಾರೆ. ಇಂತಹ ಶಿಕ್ಷಣದಿಂದ ದೇಶ, ನೆಲ-ಜಲ, ಭಾಷೆ ಉಳಿಸಲು ಸಾಧ್ಯವೇ?'' ಎಂದು ಪ್ರಶ್ನಿಸಿದ ಅವರು, ''ಜಾತಿ ತಾರತಮ್ಯದ ವ್ಯವಸ್ಥೆಗೆ ಕೊನೆಯಿಲ್ಲ. ಆದ್ದರಿಂದ ಮಕ್ಕಳಿಗೆ ಪರಸ್ಪರ ಪ್ರೀತಿ, ವಿಶ್ವಾಸ, ನಂಬಿಕೆಯಿಂದ ಬದುಕುವ ಮತ್ತು ತಪ್ಪನ್ನು ಪ್ರಶ್ನಿಸುವ ಶಿಕ್ಷಣ ನೀಡಬೇಕು.'' ಎಂದರು.

''ಕುವೆಂಪು ಅವರ ವಿಶ್ವ ಮಾನವ ಪರಿಕಲ್ಪನೆಯನ್ನು ಶಿಕ್ಷಣದಲ್ಲಿ ಅಳವಡಿಸಿಕೊಂಡು, ಅದನ್ನು ಮಕ್ಕಳ ಮನದಲ್ಲಿ ಬಿತ್ತುವ ಕೆಲಸ ಮಾಡಬೇಕು. ಜಗತ್ತಿನಲ್ಲಿ ಯಾರೂ ಮೇಲಲ್ಲ, ಯಾರೂ ಕೀಳಲ್ಲ, ಶ್ರೀಮಂತರು, ಬಡವರೆಂಬ ಬೇಧವಿಲ್ಲ, ಎಲ್ಲರೂ ಸಮಾನರು.



ನಟ ನೀನಾಸಂ ಸತೀಶ್ ಮಾತನಾಡಿದರು.



ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಸಾಧಕರಿಗೆ 'ವಿಕ-ಬಿಎಂ ಎಜುಕೇಶನ್ ಎಕ್ಸಲೆನ್ಸ್ ಅವಾರ್ಡ್ -2023' ಪ್ರದಾನ ಮಾಡಲಾಯಿತು.

ವಿಶ್ವದಲ್ಲಿ ಮಾನವ ಧರ್ಮ ಬಿಟ್ಟು ಬೇರೆ ಯಾವ ಧರ್ಮವಿಲ್ಲ. ನಾವೆಲ್ಲರೂ ಒಂದಾಗಿದ್ದು, ಒಗ್ಗಟ್ಟಿನಿಂದ ಬದುಕು ಸಾಗಿಸೋಣ ಎನ್ನುವ ಅರಿವಿನ ಜ್ಞಾನ ಮಕ್ಕಳಿಗೆ ನೀಡುವುದು ಇಂದಿನ ತುರ್ತು ಅಗತ್ಯವಾಗಿದೆ,'' ಎಂದು ತಿಳಿಸಿದರು.

## ಸಾಮಾಜಿಕ ಕಳಕಳಿ


ವಿಜಯ ಕರ್ನಾಟಕ ಸಂಪಾದಕ ಸುದರ್ಶನ ಚನ್ನಂಗಿಹಳ್ಳಿ ಮಾತನಾಡಿ, ''ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ವಿಜಯ ಕರ್ನಾಟಕವು ಸರಕಾರ ಮತ್ತು ಜನರನ್ನು ಎಚ್ಚರಿಸುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದೆ. ಜತೆಗೆ, ಕೃಷಿ, ಶಿಕ್ಷಣ, ವೈದ್ಯಕೀಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಎಲೆಮರೆಯ ಕಾಯಿಯಂತಿರುವ ಸಾಧಕರನ್ನು ಗುರುತಿಸಿ ಪ್ರೋತ್ಸಾಹಿಸುತ್ತಿದೆ. ಸಾಮಾಜಿಕ ಕಳಕಳಿಗಾಗಿ ನಿರಂತರವಾಗಿ ಒಂದಿಲ್ಲೊಂದು ಕಾರ್ಯಕ್ರಮ ಆಯೋಜಿಸುತ್ತಿದೆ,'' ಎಂದು ಹೇಳಿದರು.

''ಸಮಾಜದಲ್ಲಿ ನಕಾರಾತ್ಮಕ ಆಲೋಚನೆಗಳು ಹೆಚ್ಚಾಗಿವೆ. ಅವುಗಳ ಮಧ್ಯೆ ಸಾಕಷ್ಟು ಜನ ನಿರಂತರ ಹೋರಾಟದ ಮೂಲಕ ಸಾಧನೆ ಮಾಡುತ್ತಲೇ ಇದ್ದಾರೆ. ಅಂತಹ ಸಾಧಕರನ್ನು ಗುರುತಿಸಿ ಪ್ರೋತ್ಸಾಹಿಸುವ ಜತೆಗೆ ಅವರನ್ನು ನೋಡಿ ಮತ್ತೊಬ್ಬರು ಸಾಧನೆ ಮಾಡಲಿ ಎಂಬ ಸದುದ್ದೇಶದಿಂದ 'ವಿಕ' ಪ್ರಶಸ್ತಿ ನೀಡಲಾಗುತ್ತಿದೆ,'' ಎಂದರು.

''ವಿದ್ಯಾರ್ಥಿಗಳಲ್ಲಿ ಪರೀಕ್ಷಾ ಭಯ ಹೋಗಲಾಡಿಸಿ, ಮಾನಸಿಕವಾಗಿ ಸಿದ್ಧಗೊಳಿಸಲು ವಿಜಯೀಭವ, ಚರ್ಚಾ ಸ್ಪರ್ಧೆಯಂತಹ ಕಾರ್ಯಕ್ರಮ ಆಯೋಜಿಸುವ ಮೂಲಕ ವಿಜಯ ಕರ್ನಾಟಕವು ನಿರಂತರವಾಗಿ ಓದುವ ಆಸಕ್ತಿಯನ್ನು ಬೆಳೆಸುವ ಕೆಲಸ ಮಾಡುತ್ತಿದೆ,'' ಎಂದರು.

**ಕಲಿಕೆಯು ನಿರಂತರವಾದದ್ದು, ಅದಕ್ಕೆ ಕೊನೆಯಿಲ್ಲ. ಶಾಲೆ ಎಂದರೆ ಸುಂದರ ಕಟ್ಟಡ, ಅತ್ಯುತ್ತಮ ಪೀಠೋಪಕರಣ, ಕ್ರೀಡಾಂಗಣ ಇವುಗಳೆಲ್ಲದರ ಜತೆಗೆ ಗುಣಮಟ್ಟದ ಶಿಕ್ಷಣ ನೀಡುವುದು. ಇಂದು ಶ್ರೀಮಂತಿಕೆ ಎನ್ನುವುದು ಹಣವಲ್ಲ, ಶ್ರೀಮಂತಿಕೆ ಎಂದರೆ ಜ್ಞಾನ. ರಾಜ್ಯ, ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಸುದ್ದಿ ಪ್ರಕಟಿಸುವುದು ನಮ್ಮ ಸಂಸ್ಥೆಯ ಗುರಿ. ಕರ್ನಾಟಕದಲ್ಲಿ ಅತಿ ಹೆಚ್ಚು ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಿವೆ. ಕರ್ನಾಟಕವು ಶಿಕ್ಷಣ ಕ್ಷೇತ್ರದಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದೆ. ಇಲ್ಲಿಯ ಶಿಕ್ಷಣ ಸಂಸ್ಥೆಗಳನ್ನು ಗುರುತಿಸಿ ಪ್ರಶಸ್ತಿ ನೀಡುತ್ತಿರುವುದಕ್ಕೆ ಸಂತೋಷವಾಗುತ್ತದೆ.**

**-ದೀಪಕ್ ಸಲುಜ,** ಸಿಇಒ, ವಿಜಯ ಕರ್ನಾಟಕ ಮತ್ತು ಬೆಂಗಳೂರು ಮಿರರ್




ಕಾರ್ಯಕ್ರಮವನ್ನು ನಟ ನೀನಾಸಂ ಸತೀಶ್ ಉದ್ಘಾಟಿಸಿದರು. ವಿಜಯ ಕರ್ನಾಟಕ ಮತ್ತು ಬೆಂಗಳೂರು ಮಿರರ್ ಸಿಇಒ ದೀಪಕ್ ಸಲುಜ, ವಿಕ ಸಂಪಾದಕ ಸುದರ್ಶನ ಚನ್ನಂಗಿಹಳ್ಳಿ ಉಪಸ್ಥಿತರಿದ್ದರು.



ಸಾಂಸ್ಕೃತಿಕ ಕಾರ್ಯಕ್ರಮಗಳ ಮೆರುಗು.

## ಪ್ರಶಸ್ತಿ ಪುರಸ್ಕೃತರು



**ಪ್ರೊ.ಡಾ. ಎ.ವಿ.ಶ್ರೀನಿವಾಸನ್**
ಸಂಸ್ಥಾಪಕ ಅಧ್ಯಕ್ಷರು
ಶ್ರೀ ಪರಿಪೂರ್ಣ ಸನಾತನ ಆಯುರ್ವೇದ ವೈದ್ಯಕೀಯ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಮತ್ತು ಐಐಎಚ್‌ಎಸ್, ಅರ್ಜುನಬೆಟ್ಟಹಳ್ಳಿ, ನೆಲಮಂಗಲ.



**ಬಿ.ಎಂ.ದೇವರಾಜಪ್ಪ**
ಚೇರ್ಮನ್
ದೇವ್-ಇನ್ ನ್ಯಾಷನಲ್ ಸ್ಕೂಲ್ ಮತ್ತು ಕಾವೇರಿ ಬಿ.ಇಡಿ ಕಾಲೇಜು, ಸಹಕಾರ ನಗರ, ಬೆಂಗಳೂರು.



**ಅವಿರಾಮ್ ಶರ್ಮ**
ಟ್ರಸ್ಟಿ, ಬಿಎಂಎಸ್ ಎಜುಕೇಷನಲ್ ಟ್ರಸ್ಟ್, ಬಿಎಂಎಸ್ ಕಾಲೇಜ್ ಆಫ್ ಕಾಮರ್ಸ್, ಬಿಎಂಎಸ್ ಐಟಿ, ಮತ್ತು ಬಿಎಂಎಸ್ ಕಾಲೇಜ್ ಆಫ್ ಲಾ.



**ಎಸ್.ಕೆ.ರಾಮಚಂದ್ರ**
ಕಾರ್ಯದರ್ಶಿ
ವಿಶ್ವಭಾರತಿ ಪಬ್ಲಿಕ್ ಸ್ಕೂಲ್, ಐಕಾನ್ ಇಂಟರ್ ನ್ಯಾಷನಲ್ ರೆಸಿಡೆನ್ಶಿಯಲ್ ಸ್ಕೂಲ್, ಹುಣಸೂರು, ಮೈಸೂರು ಜಿಲ್ಲೆ.



**ಕೆ.ಕೆ ಪೂರ್ಣ**
ಕಾರ್ಯದರ್ಶಿ
ನ್ಯೂ ಹಾರ್ಡ್‌ವಿಕ್ ಇಂಡಿಯನ್ ಸ್ಕೂಲ್ (ಸಿಬಿಎಸ್ಇ), ಕೊಡಿಗೇಹಳ್ಳಿ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು.



**ಪಿಲ್ಲಲಾ ಪೂನಂ ರಾವ್**
ಪ್ರಾಂಶುಪಾಲರು
ಗ್ರೇಟ್ ಈಸ್ಟರ್ನ್ ಇಂಟರ್ ನ್ಯಾಷನಲ್ ಪಬ್ಲಿಕ್ ಸ್ಕೂಲ್, ಸಿಬಿಎಸ್‌ಸಿ ಬೋರ್ಡ್, ಮಾಗಡಿ ರಸ್ತೆ, ಬೆಂಗಳೂರು.



**ನೇತ್ರಾವತಿ ಜಿ.**
ಸಂಸ್ಥಾಪಕಿ ಮತ್ತು ಪ್ರಾಂಶುಪಾಲರು
ಬ್ಲೂಮಿಂಗ್ ಬಡ್ಸ್ ಪ್ರಿ ಸ್ಕೂಲ್ ಮತ್ತು ಡೇ ಕೇರ್, ಬೇಗೂರು, ಬೆಂಗಳೂರು.



**ಧನಂಜಯ್.ಜಿ.ಕೆ**
ಪ್ರಾಂಶುಪಾಲರು,
ವಲ್ಲಭ ಇಂಟರ್‌ನ್ಯಾಷನಲ್ ಸ್ಕೂಲ್
**ಎಚ್.ಪಿ.ಲಕ್ಷ್ಮಣ**
ಚೇರ್ಮನ್ ಮತ್ತು ವ್ಯವಸ್ಥಾಪಕ ಟ್ರಸ್ಟಿ



**ಡಾ.ಏಂಜೆಲೊ ಮೈಕೆಲ್ ಡಿ ಕ್ರೂಜ್**
ನಿರ್ದೇಶಕ ಮತ್ತು ಶಿಕ್ಷಣ ತಜ್ಞ
ಪ್ರೆಸಿಡೆನ್ಸಿ ಶಾಲೆ, ಬೆಂಗಳೂರು ಉತ್ತರ.



**ಡಿ.ಗಂಗಮ್ಮ**
ಅಧ್ಯಕ್ಷರು
ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್, ಸುಂಕದಕಟ್ಟೆ, ಬೆಂಗಳೂರು.



**ಪ್ರತಿಭಾ ಕೆ.**
ಪ್ರಿನ್ಸಿಪಾಲ್
ವಿಇಎಸ್ ಮಾಡೆಲ್ ಕಾನ್ವೆಂಟ್, ಮಾಗಡಿ ರೋಡ್ ಬೆಂಗಳೂರು.



**ಡಾ. ಎನ್.ಭೂಷಣ್**
ಪ್ರಾಂಶುಪಾಲರು
ಬಿಎನ್‌ಆರ್ ಪಬ್ಲಿಕ್ ಸ್ಕೂಲ್ ಬಾಬಣ್ಣ ಬಡಾವಣೆ, ಮಲ್ಲಸಂದ್ರ.



**ಎಲ್.ನಾಗರಾಜ್ ಸೆಟ್ಟಿ**
ವ್ಯವಸ್ಥಾಪಕ ನಿರ್ದೇಶಕರು ಮತ್ತು ಖಜಾಂಚಿ
ಶ್ರೀ ರಾಮ ವಿದ್ಯಾಲಯ.



**ಸಲ್ಮಾನ್ ಅಹ್ಮದ್**
ಉಪಾಧ್ಯಕ್ಷರು
ಪ್ರೆಸಿಡೆನ್ಸಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್.



**ಆನಂದ್ ಮುರಳಿ ಮತ್ತು ಮುರಳಿ ಎಸ್.**
ಪಾಲುದಾರರು ಮತ್ತು ನಿರ್ದೇಶಕರು
ARSCCOM ಲರ್ನಿಂಗ್.



**ಉಷಾ ರವೀಂದ್ರನಾಥ್**
ಮುಖ್ಯಸ್ಥರು
ಆಕ್ಸ್‌ಫರ್ಡ್ ಇನ್‌ಸ್ಟಿಟ್ಯೂಷನ್ಸ್ ನಾಗರಬಾವಿ ಮತ್ತು ಉಲ್ಲಾಳ, ಬೆಂಗಳೂರು.



**ಮೀನಾ ಜಯಚಂದ್ರ**
ನಿರ್ದೇಶಕಿ
ಆಡೆನ್ ಪಬ್ಲಿಕ್ ಸ್ಕೂಲ್, ಐಸಿಎಸ್ಇ ಬೋರ್ಡ್, ಗಿರಿನಗರ.



**ಶೋಭಾ ಆರ್.ಸಿಂಗ್**
ಉಪ ಪ್ರಾಂಶುಪಾಲರು
ಈಸ್ಟ್‌ವೆಸ್ಟ್ ಅಕಾಡೆಮಿ, ಸಿಬಿಎಸ್ಇ ಬೋರ್ಡ್, ರಾಜಾಜಿನಗರ.



**ಪಲ್ಲವಿ ಮತ್ತು ಶರತ್ ಖಾದ್ರಿ**
ಸಂಸ್ಥಾಪಕಿ ಮತ್ತು ಸಹ ಸಂಸ್ಥಾಪಕ
ಆಟಮ್ ಲೀವ್ಸ್ ಪ್ರಿಸ್ಕೂಲ್, ಬೆಂಗಳೂರು.



**ನೇತ್ರಾಜ್ ಗುರುವಿನಮಠ**
ಸಂಸ್ಥಾಪಕ ಅಧ್ಯಕ್ಷರು
ಮಹಾನ್ ಕಿಡ್ಸ್ ಸ್ಕೂಲ್, ಗಂಗಾವತಿ.



**ಡಾ.ಗಣೇಶ್.ಪಿ.ಬಿ**
ಶೈಕ್ಷಣಿಕ ನಿರ್ದೇಶಕರು
ಧನ್ವಂತರಿ ಸಮೂಹ ಸಂಸ್ಥೆಗಳು.



**ಲಿಜಿ ಅನೀಶ್**
ಪ್ರಿನ್ಸಿಪಾಲ್
ನಕ್ಷ ಅಕಾಡೆಮಿ, ಗುಂಜೂರು.



**ಆರ್. ಗುಣಶೀಲನ್**
ಕಾರ್ಯದರ್ಶಿ
ಆರ್.ಇ.ಎಸ್ ಪಾಲಿಟೆಕ್ನಿಕ್ ಹೆಗ್ಗನಹಳ್ಳಿ ಕ್ರಾಸ್ ಸುಂಕದಕಟ್ಟೆ.



**ಬಿ.ಅನಂತ ಸಿಂಗ್**
ನಿರ್ದೇಶಕರು ಮತ್ತು ಚೇರ್ಮನ್
ಶ್ರೀ ಸಾಯಿ ಸದ್ಭಾವನಾ ಶಾಲೆ.



**ರೂಪ ಮಹೇಶ್**
ಅಧ್ಯಕ್ಷರು
ನ್ಯೂ ನ್ಯಾಷನಲ್ ಪದವಿ ಪೂರ್ವ ಕಾಲೇಜು, ಕೆಂಗೇರಿ.



**ಸಂಧ್ಯಾ ರಾಮನ್**
ಪ್ರಾಂಶುಪಾಲರು
ಪ್ರೆಸಿಡೆನ್ಸಿ ಸ್ಕೂಲ್, ಬನಶಂಕರಿ.



**ಮಮತಾ ರಾವ್**
ಪ್ರಿನ್ಸಿಪಾಲ್
ತತ್ವ ಸ್ಕೂಲ್, ಕುಂಬಳಗೋಡು, ಬೆಂಗಳೂರು.



**ಐ. ಲಕ್ಷ್ಮೀ ರೆಡ್ಡಿ**
ನಿರ್ದೇಶಕ
ವಿಷನ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್, ಬೆಂಗಳೂರು.



**ಪ್ರಕಾಶ್‌ಚಂದ್ರ ಶೆಟ್ಟಿ**
ಚೇರ್ಮನ್ ಮತ್ತು ಮ್ಯಾನೇಜಿಂಗ್ ಟ್ರಸ್ಟಿ ಜಿ.ಎಂ.ಗ್ಲೋಬಲ್ ಸ್ಕೂಲ್, ಬ್ರಹ್ಮಾವರ, ಉಡುಪಿ ಜಿಲ್ಲೆ

Published for the Proprietors, Metropolitan Media Company Limited, by R.J. Prakashan at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru-560011. (Ph: 080-40877666) and printed by him at Bennett Coleman & Co Ltd., The Times of India Press, No. 9/10/11-A, 4th Main, KIADB Bommasandra Industrial Area, Anekal Taluk, Bangalore - 560 099 (Ph: 080-42200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru-560011 (Ph: 080-40877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.
RNI No. 71653/99
Vol. 25 Issue No. 053